ಕಾರ್ಟಿಕೋಸ್ಟೀರಾಯ್ಡ್ ಇಂಜೆಕ್ಷನ್ ಕೊಟ್ಟ ಎರಡು ವಾರದ ನಂತರ ಇಂಥಾ ಅಡ್ಡಪರಿಣಾಮ ಕಾಣಿಸಿಕೊಳ್ಳಬಲ್ಲದೆ?' ಕೇಳಿದೆ. 'ಅರೆ ಒಂದು ತಿಂಗಳ ನಂತರವೂ ಕಾಣಿಸಿಕೊಂಡದ್ದಿದೆ'. ಈ ವೈದ್ಯರಿಗೆ ಅಡ್ಡಪರಿಣಾಮ ತಿಳಿದಿತ್ತು! 'ಹಾಗಾದರೆ ನನಗೆ ಆದದ್ದು ಅಡ್ಡಪರಿಣಾಮವೇ ಇರಬೇಕಲ್ಲವೆ?' ಕೇಳಿದೆ.

'ಹೌದೆನಿಸುತ್ತದೆ. ಅದಕ್ಕೆಂದೇ ನಿಮಗೆ ಯಾವುದೇ ಚಿಕಿತ್ಸೆ ಈಗ ಕೊಡುತ್ತಿಲ್ಲ. ಯಾವ ಔಷಧಿಯೂ ಬೇಕಿಲ್ಲ'. ಅಡ್ಡಪರಿಣಾಮದಿಂದ ಆಗುವ ರಕ್ತಸ್ರಾವ ತನ್ನಂತೆ ತಾನೇ ನಿಂತುಹೋಗುತ್ತದೆ. 'ದಪ್ಪಗಾಗಿರುವ ಎಂಡೊಮೆಟ್ರಿಯಮ್ ನಾರ್ಮಲ್ ಆಗಲು ಸಮಯ ಬೇಕಾಗುತ್ತದೆ. ಆರು ತಿಂಗಳ ನಂತರ ಬಂದು ಮತ್ತೊಮ್ಮೆ ಸ್ಕ್ಯಾನ್ ಮಾಡಿಸಿ' ಅವರು ಹೇಳಿದರು. ಕೃತಜ್ಞತೆಯಿಂದ ಅವರಿಗೆ ವಂದಿಸಿ ಹೊರಬಂದೆ.

## ತಡವಾಗಬಲ್ಲದು ಅಡ್ಡಪರಿಣಾಮ

ನಮ್ಮ ದೇಹ ಹಲವು ಸೂಕ್ಷ್ಮಾತಿಸೂಕ್ಷ್ಮ ಜೀವರಾಸಾಯನಿಕಗಳ ಮೇಳ. ಒಂದಿಷ್ಟೇ ಇಷ್ಟು ಸಮತೋಲನ ತಪ್ಪಿದರೂ ಪರಿಣಾಮ ಎಷ್ಟು ತೀವ್ರವಾಗಬಲ್ಲದು. ಡಾ. ನಳಿನಿ ಅವರು ಅಡ್ಡಪರಿಣಾಮ 'ಒಂದು ತಿಂಗಳು ಆದ ಮೇಲೂ ಕಾಣಿಸಿಕೊಂಡದ್ದಿದೆ' ಎಂದು ಹೇಳಿದ್ದರು.

ಡಾ. ಹೆನ್ನಿ ಆನಾ ರಿಯೇ ಕ್ಲಾಂಪ್ ಅವರ ಆ ಸಂಶೋಧನಾ ಲೇಖನದಲ್ಲಿದ್ದ ವಿವರಗಳನ್ನು ಈಗ ಗಮನಿಸಿದೆ. 9 ಮಹಿಳೆಯರಲ್ಲಿ ಇಂಜೆಕ್ಷನ್ ಕೊಟ್ಟ 6 ವಾರಗಳ ನಂತರ ರಕ್ತಸ್ರಾವ ಆರಂಭವಾಗಿದ್ದನ್ನು ಅದು ತಿಳಿಸಿತ್ತು. ನಾನು ದಿಗ್ಭ್ರಮೆಯಿಂದ ಕುಳಿತುಬಿಟ್ಟೆ. ಒಂದು ಇಂಜೆಕ್ಷನ್‌ನ ಅಡ್ಡಪರಿಣಾಮ 40 ದಿನಗಳಾಚೆಗೂ ಕಾಣಿಸಿಕೊಳ್ಳಬಲ್ಲದು ಎಂದರೆ ಅದು ಅಡ್ಡಪರಿಣಾಮ ಎಂದು ಸಾಮಾನ್ಯ ಮಹಿಳೆಯರಿಗೆ ತಿಳಿಯುವುದಾದರೂ ಹೇಗೆ?

ಸಾಮಾನ್ಯವಾಗಿ ಮೂಳೆ ತಜ್ಞರು ಬಹುತೇಕ ಗಂಡಸರು. ಅವರಲ್ಲಿಗೆ ಹೋಗಿ ಮಹಿಳೆಯರು ಇಂಜೆಕ್ಷನ್ ತೆಗೆದುಕೊಳ್ಳುತ್ತಾರೆ. ಇಂಜೆಕ್ಷನ್ ಕೊಟ್ಟ ತಕ್ಷಣ ರಕ್ತಸ್ರಾವ ಆರಂಭವಾದರೆ ಏನಾದರೂ ಸುಳಿವು ಸಿಗಬಲ್ಲದು. ಆದರೆ ರಕ್ತಸ್ರಾವ 10ರಿಂದ 40 ದಿನಗಳ ನಂತರ ಆಗಬಲ್ಲದು. ಅದನ್ನು ಮಹಿಳೆಯರು ತಾವು ಚುಚ್ಚಿಸಿಕೊಂಡ ಇಂಜೆಕ್ಷನ್‌ಗೆ ಹೇಗೆ ಸಮೀಕರಿಸಬಲ್ಲರು? ಗರ್ಭಕೋಶದ ರಕ್ತಸ್ರಾವ ಆರಂಭವಾದಾಗ ಸ್ತ್ರೀರೋಗ ತಜ್ಞರ ಬಳಿಗೆ ಓಡುತ್ತಾರೆ. ತಾವು ಮೂಳೆ ವೈದ್ಯರ ಬಳಿ ವಾರವೋ, ತಿಂಗಳೋ ಹಿಂದೆ ತೆಗೆದುಕೊಂಡ ಇಂಜೆಕ್ಷನ್ ಕುರಿತು ಪ್ರಸ್ತಾಪಿಸುವುದಿಲ್ಲ, ಮಂಡಿನೋವಿಗೂ ಗರ್ಭಕೋಶಕ್ಕೂ ಏನು ಸಂಬಂಧ ಅಂದುಕೊಂಡು.

ಮೂಳೆ ವೈದ್ಯರಿಗೆ 'ಫೀಡ್‌ಬ್ಯಾಕ್' ಹೋಗದ ಕಾರಣ, ಬಹುತೇಕ ಮೂಳೆ ವೈದ್ಯರಿಗೆ ಈ ಇಂಜೆಕ್ಷನ್‌ನ ಅಡ್ಡಪರಿಣಾಮ ತಿಳಿದಿರದೆ ಇರುವ ಸಾಧ್ಯತೆ ಇದೆ. ಅವರು ಇಂಜೆಕ್ಷನ್ ಕೊಡುವ ಮೊದಲು ಮುಟ್ಟು ನಿಂತ ಮಹಿಳೆಯರನ್ನು ಎಚ್ಚರಿಸುತ್ತಿಲ್ಲ. ನನ್ನ ಅಮ್ಮ, ಅಕ್ಕನಿಗೆ ಎಂದೂ ಎಚ್ಚರಿಸಿರಲಿಲ್ಲ. ನಮ್ಮ ದೇಶದಲ್ಲಿ ಮಾತ್ರವಲ್ಲ ಅಮೆರಿಕ, ಯೂರೋಪ್, ಕೊರಿಯಾ ದೇಶಗಳಲ್ಲೂ ಕೂಡ ಇದೇ ಸ್ಥಿತಿ ಎಂದು ವಿಶ್ವದಾದ್ಯಂತ ಪ್ರಕಟವಾದ ಒಂದೊಂದೇ ಕೇಸ್ ಸ್ಟಡಿಗಳಿಂದ ತಿಳಿದುಬರುತ್ತದೆ.

ಅನೇಕ ಸ್ತ್ರೀರೋಗತಜ್ಞರಿಗೂ ಇದು ತಿಳಿದಿರದೇ ಇರುವ ಸಾಧ್ಯತೆ ಇದೆ. ನನ್ನ ಅದೃಷ್ಟ ಡಾ. ನಳಿನಿ ಅವರಿಗೆ ಈ ವಿಷಯದ ಬಗ್ಗೆ ತಿಳಿದಿತ್ತು, ಅವರು ತಮ್ಮಲ್ಲಿಗೆ ಬಂದ ರೋಗಿಗಳಲ್ಲಿ ಇದನ್ನು ಗಮನಿಸಿದ್ದರು. ಹಾಗೆಂದೇ ನನಗೆ ಯಾವುದೇ ಚಿಕಿತ್ಸೆಯ ಅಗತ್ಯವಿಲ್ಲ ಎಂದು ತಿಳಿಸಿದ್ದರು. ಇಂತಹ ಸಂದರ್ಭದಲ್ಲಿ ಅನಗತ್ಯದ ಚಿಕಿತ್ಸೆಯನ್ನು ಆರಂಭಿಸಿಬಿಟ್ಟು, ಪರಿಸ್ಥಿತಿ ಮತ್ತಷ್ಟು ಸಂಕೀರ್ಣವಾದ ಪ್ರಕರಣಗಳನ್ನು ನಾನು ಮುಂದೊಮ್ಮೆ ಓದಲಿದ್ದೆ.

ಅಂದಹಾಗೆ ನನ್ನ ಗೆಳತಿಯೊಬ್ಬಳಿಗೆ ಕೊಟ್ಟ 'ಟೆನಿಕಾರ್ಟ್' ಎಂಬ ಔಷಧಿಯಲ್ಲಿಯೂ 'ಟ್ರಿಅಮ್ಸಿನೊಲೋನ್ ಆಸಿಟೋನೈಡ್' ಇದ್ದು, ಇಂತಹುದೇ ರಕ್ತಸ್ರಾವ ಕಾಣಿಸಿಕೊಂಡಿತು. ಆದರೆ 'ಟೆನಿಕಾರ್ಟ್' ಎಂಬ ಔಷಧಿಯ ಯಾವೊಂದು ಮಾಹಿತಿಯೂ ಅಂತರ್ಜಾಲದಲ್ಲಿ ದೊರೆಯಲಿಲ್ಲ. ಮೆಡಿಕಲ್ ಶಾಪ್‌ಗಳಲ್ಲಿ ವಿಚಾರಿಸಿದಾಗ, ಅಂತಹುದೊಂದು ಔಷಧಿ ಇಲ್ಲವೇ ಇಲ್ಲ ಎಂದರು. ಆದರೂ ಅದು ಆಕೆ ಹೋಗಿದ್ದ ವೈದ್ಯರ ಸ್ವಂತದ ಔಷಧಿ ಅಂಗಡಿಯಲ್ಲಿ ಯಥೇಚ್ಛವಾಗಿ ದೊರೆಯುತ್ತಿತ್ತು!



## 'ಅನ್‌ಕಾಮನ್' ಅಲ್ಲ!

ವೈದ್ಯರು ಜನವರಿ 2024ರ ನಂತರ ಸ್ಕ್ಯಾನಿಂಗ್ ಮಾಡಿಸಲು ಹೇಳಿದ್ದರು, ದಪ್ಪವಾಗಿದ್ದ ಗರ್ಭಕೋಶದ ಒಳಪದರು ತನ್ನ ನಾರ್ಮಲ್ ಅಳತೆಗೆ ಹಿಂತಿರುಗಿತೆ ಎಂದು ತಿಳಿಯಬೇಕಿತ್ತು. ಹಿಂದೆ ವೈದ್ಯರು ಹೇಳಿದಂತೆ, ಸ್ಕ್ಯಾನಿಂಗ್‌ಗೆ ಹಾಜರಾದೆ. ಮತ್ತೆ ಶೋಧಕ ನಳಿಕೆ ಗರ್ಭಕೋಶದೊಳಗೆ ಇಣುಕಿತು. ಯಾವುದೆ ಚಿಕಿತ್ಸೆ ಇಲ್ಲದೆ, ತನ್ನಷ್ಟಕ್ಕೆ ತಾನೇ ಗರ್ಭಕೋಶದ ಒಳಪದರು 9.2 ಮಿ.ಮೀ. ನಿಂದ 1.7 ಮಿ.ಮೀ.ಗೆ ಬಂದಿತ್ತು, ಅದು ನನ್ನ ವಯಸ್ಸಿನ ಮುಟ್ಟು ನಿಂತ ಮಹಿಳೆಗೆ ನಾರ್ಮಲ್ ಅಳತೆಯದಾಗಿತ್ತು.

'ಮೇಡಂ, ನಾನು ನನ್ನ ಪರಿಚಿತರಾದ ಮೂರ್ನಾಲ್ಕು ಸ್ತ್ರೀರೋಗ ತಜ್ಞರಲ್ಲಿ ಕೇಳಿದೆ, ಅವರಾರಿಗೂ ಇಂತಹುದೊಂದು ಅಡ್ಡಪರಿಣಾಮ ಇದೆ ಎಂದು ತಿಳಿದಿರಲಿಲ್ಲ. ನಿಮಗೆ ಹೇಗೆ ಧನ್ಯವಾದ ಹೇಳಬೇಕು ತಿಳಿಯದು' ಎನ್ನುತ್ತಾ ಮನದುಂಬಿ ಕೃತಜ್ಞತೆ ತಿಳಿಸುತ್ತಾ ಮನೆಗೆ ಬಂದೆ.

ಈ ಇಂಜೆಕ್ಷನ್‌ನ ಅಡ್ಡಪರಿಣಾಮ 'ಅನ್‌ಕಾಮನ್' ಅಲ್ಲ, 'ಅಂಡರ್‌ರಿಪೋರ್ಟೆಡ್' ಎಂದು ನನಗೆ ಮನವರಿಕೆ ಆಗಿತ್ತು. ನನ್ನ ಅನುಭವದಿಂದ ನಾನು ಅರಿತ ಪಾಠಗಳ ಪಟ್ಟಿ ಹೀಗಿದೆ:

- ಕಾರ್ಟಿಕೋಸ್ಟೀರಾಯ್ಡ್ ಇಂಜೆಕ್ಷನ್‌ನ ಒಂದು ಅಡ್ಡಪರಿಣಾಮ 'ಮುಟ್ಟು ನಿಂತ ಮಹಿಳೆಯರಲ್ಲಿ ಗರ್ಭಕೋಶದ ರಕ್ತಸ್ರಾವ'.
- ಇದು ಅಪರೂಪವಲ್ಲ, ನೂರರಲ್ಲಿ 17 ಅಥವಾ 18 ಮಹಿಳೆಯರಲ್ಲಿ ಆಗಬಲ್ಲ ಅಡ್ಡಪರಿಣಾಮ.
- ಈ ಅಡ್ಡಪರಿಣಾಮ ಇಂಜೆಕ್ಷನ್ ಕೊಟ್ಟ 10ರಿಂದ 40 ದಿನಗಳ ನಂತರ ಕೂಡ ಕಾಣಿಸಿಕೊಳ್ಳಬಲ್ಲದು.

ಮೂಳೆ ವೈದ್ಯರು ಈ ಇಂಜೆಕ್ಷನ್ ಕೊಡುವ ಮೊದಲು ಎಚ್ಚರಿಸಿದರೆ ಮಹಿಳೆಯರ ಆತಂಕ ತಪ್ಪಬಲ್ಲದು. ಸ್ತ್ರೀರೋಗ ತಜ್ಞರು ತಮ್ಮಲ್ಲಿಗೆ ಇಂತಹ ಕಾರಣಕ್ಕೆ ಬರುವ ಮಹಿಳೆಯರಿಗೆ 'ಕಳೆದ ಎರಡು ತಿಂಗಳಲ್ಲಿ ಇಂತಹ ಇಂಜೆಕ್ಷನ್ ಏನಾದರೂ ತೆಗೆದುಕೊಂಡಿದ್ದಿರಾ?' ಎಂದು ಕೇಳುವುದು ಒಳ್ಳೆಯದು. ಎಲ್ಲಕ್ಕಿಂತ ಮುಖ್ಯವಾಗಿ ಮುಟ್ಟು ನಿಂತ ಮಹಿಳೆಯರು ಈ ಇಂಜೆಕ್ಷನ್ ತೆಗೆದುಕೊಳ್ಳುವ ಮೊದಲು ಇಂತಹ ಅಡ್ಡಪರಿಣಾಮದ ಸಾಧ್ಯತೆ ಇದೆ ಎಂದು ಅರಿಯುವುದು ಒಳ್ಳೆಯದು. ಅರಿವೊಂದೇ ನಮ್ಮನ್ನು ಅನಗತ್ಯದ ಪ್ರಕರಣಗಳಿಂದ ಪಾರು ಮಾಡಬಲ್ಲದು.